5 ಸದಸ್ಯರ ವರ್ತನೆ ಬಗ್ಗೆ ಅಧ್ಯಕ್ಷರ ಆಕ್ರೋಶ

ಅಧ್ಯಕ್ಷರು ಈಗ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು .. ..ಸಂಬಂಧಪಟ್ಟ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ಮಾನ್ಯ ಶಾಸಕರ ಮನವಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳೂ ಸಹ ಅಲಿಸುತ್ತಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ

ಶ್ರೀ ಬಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ದಯಮಾಡಿ ಉತ್ತರವನ್ನು ಕೊಡಿಸಿ

ಅಧ್ಯಕ್ಷರು ಉತ್ತರ ಕೊಡುತ್ತಾರೆ ದಯಮಾಡಿ ಕುಳಿತುಕೊಳ್ಳಿ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಯಾರು ತಮ್ಮ ಕರ್ತವ್ಯ ಲೋಪ ಮಾಡಿದ್ದಾರೆ ಅವರು ಸಬ್ ಇನ್ಸ್‌ಪೆಕ್ಟರ್ ಇರಬಹುದು, ಇನ್ಸ್‌ಪೆಕ್ಟರ್ ಇರಬಹುದು, ಮತ್ತು ಡಿವೈಎಸ್‌ಪಿ ಇರಬಹುದು ಮತ್ತೆ ಯಾರು ಅಗೌರವವಾಗಿ ವರ್ತಿಸಿದ್ದಾರೆ, ಆ ಬಗ್ಗೆ ಸರ್ಕಾರ ವರದಿ ತರಿಸಿ ಕೊಂಡು ಕಾನೂನು ಪ್ರಕಾರವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೇ, ಇಲಾಖಾ ವಿಚಾರಣೆಯನ್ನು ಮಾಡಿಸಿ ತಪ್ಪಿತಸ್ಥರ ಮೇಲೆ ಅಗತ್ಯವಾದ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು

ಶ್ರೀ ಬಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೇ, ಅಲ್ಲಿಯವರೆಗೆ ಅವರನ್ನು ಸಸ್ಪೆಂಡ್ ಮಾಡಿ ಅಮೇಲೆ ವಿಚಾರಣೆ ಮಾಡಿ

ಗೊಂದಲ

ಅಧ್ಯಕ್ಷರು ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ಇದೇನು ಈ ತರಹ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

ಗೊಂದಲ

ಅಧ್ಯಕ್ಷರು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಇದೇನ್ರಿ ಇದು ಸಂತೆ ಮಾಡಿಕೊಂಡಿದ್ದೀರಿ ನೀವು ದಯಮಾಡಿ ಕುಳಿತುಕೊಳ್ಳಿ ಪಾಟೀಲರೇ, ಏನ್ರಿ ನೀವು? ನೀವು ಇನ್ಸ್‌ಪೆಕ್ಟರ್ ಆಗಿದ್ದವರು ಈ ತರಹ ಮಾಡಿದರೆ ಹೇಗೆ? ಜವಾಬ್ದಾರಿಯಿಂದ ನಡೆದು ಕೊಳ್ಳಬೇಕು ಉತ್ತರ ಬೇಕು ಅಂದಿರಿ ಉತ್ತರ ಕೊಟ್ಟಿದ್ದಾರೆ ನೀವು ಬಯಸಿದ ಉತ್ತರ ಕೊಡಿಸುವುದಕ್ಕಾಗುತ್ತದೇನು? ತಾವು ಈ ರೀತಿ ಮಾಡಿದರೆ ನಾನು ಶಿಸ್ತಿನ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ ದಯಮಾಡಿ ಕುಳಿತುಕೊಳ್ಳಿ ಈಗ ಬಹಳ ಜನ ಸದಸ್ಯರು ಏನು ಮಾಡುತ್ತಿದ್ದಾರೆಂದರೆ ಇಲ್ಲಿಗೆ ಬಂದಿರುವುದು ಸ್ವಚ್ಛಂದವಾಗಿ ತಮಗೆ ಇಷ್ಟ ಬಂದ ರೀತಿಯಲ್ಲಿ ವರ್ತಿಸುವುದಕ್ಕೆಂದು ತಿಳಿದುಕೊಂಡಿದ್ದಾರೆ ಹೊಸ ಸದಸ್ಯರಿಗೆ ನಾನು ಈಗ ವಾರನ್ ಮಾಡುತ್ತಿದ್ದೇನೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ನೀವು ಆಡಳಿತ ಪಕ್ಷದವರು ನಿಮಗೆ ಜವಾಬ್ದಾರಿ ಇದೆಯೇನು? ಯಾರಿಗೂ ಏನೂ ಜವಾಬ್ದಾರಿ ಇದ್ದಂತೆ ಇಲ್ಲ ಮಾನ್ಯ ಸಚೇತಕರೇ, ನಿಮ್ಮ ಸದಸ್ಯರನ್ನು ನೀವು ನಿಯಂತ್ರಣ ಮಾಡಿ ನಿಯಂತ್ರಣ ಮಾಡಲು ಆಗದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಏನಿದು ಸಂತೆಯಲ್ಲಿ ವರ್ತಿಸುವಂತೆ

ವರ್ತಿಸುತ್ತಿದ್ದಾರೆ? ಏನಿದು ಇವರಿಗೆ ಜವಾಬ್ದಾರಿಯೇ ಇಲ್ಲ ನೋಡಿ ನಿಮ್ಮ ಸದಸ್ಯರು ಇಷ್ಟೊಂದು ಬೇಜವಾಬ್ದಾರಿ ರೀತಿಯಲ್ಲಿ ಈ ರೀತಿ ಪ್ರತಿಯೊಂದಕ್ಕೂ ನಿಂತುಕೊಂಡರೆ ಇದನ್ನು ನಾನು ಸಹಿಸುವುದಕ್ಕೆ ಸಾಧ್ಯವಿಲ್ಲ ನೋಡಿ ಯಾವ ರೀತಿ ವರ್ತಿಸುತ್ತಿದ್ದಾರೆ ಅವರಿಗೆ ಏನಾಗಿದೆ ಅಂದರೆ ನಾವು ಏನು ಬೇಕಾದರೂ ಮಾಡಬಹುದು,..... ಈಗ ಮಾನ್ಯ ರಾಜಾಜೀಯವರು ಏನು ಹೇಳಿದರು ಅಂದರೆ, Liberty is not Licence" ಆದರೆ ಈ ಸದಸ್ಯರು ಲೈಸೆನ್ಸ್ ತೆಗೆದುಕೊಂಡಿದ್ದಾರೆ ಒಳಗೆ ಬಂದಿರುವುದೇ ಇವರಿಗೆ ಒಂದು ಲೈಸೆನ್ಸ್ ಪ್ರತಿಯೊಬ್ಬರೂ ನಿಮ್ಮ ನಿಮ್ಮ ಜವಾಬ್ದಾರಿಗಳನ್ನು ಅರ್ಥ ಮಾಡಿಕೊಳ್ಳಬೇಕು ಏನಿದು?

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ

ಅಧ್ಯಕ್ಷರು ಈ ಕಡೆ ಸದಸ್ಯರು ಅಷ್ಟೇ, ಆ ಕಡೆಯ ಸದಸ್ಯರು ಅಷ್ಟೇ ಯಾರಿಗೂ ಜವಾಬ್ದಾರಿ ಇಲ್ಲ

ಗೊಂದಲ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೇ, ನಮ್ಮ ಕಡೆ ಸದಸ್ಯರು ನೋಡಿ ಎಷ್ಟು ಗಂಭೀರವಾಗಿ ವರ್ತಿಸುತ್ತಿದ್ದಾರೆ ತಾವು ಆ ಕಡೆಯ ಸದಸ್ಯರಿಗೆ ಹೇಳಬೇಕು

ಗೊಂದಲ

ಅಧ್ಯಕ್ಷರು ಹೊಸ ಸದಸ್ಯರುಗಳು ಇದ್ದಾರಲ್ಲಾ ಅವರುಗಳಿಗೆ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ಆಸೆ ನಾಳೆ ಸದನ ಕೊನೆಯಾಗುತ್ತದೆ ಇದು ನನಗೆ ಅರ್ಥವಾಗುತ್ತದೆ ನಾನು ಬಹಳ ಜನರಿಗೆ ಅವಕಾಶ ಕೊಡುತ್ತಿದ್ದೇನೆ ಈಗಾಗಲೇ ಒಂದೂಮುಕ್ಕಾಲು ಗಂಟೆ ಆಯಿತು ಈಗ ಇಷ್ಟೊಂದು ಗಲಾಟೆಯಾಯಿತು ಇಷ್ಟರಲ್ಲಿ ನಾಲ್ಕು ಜನ ಸದಸ್ಯರು ಸರ್ಕಾರದ ಗಮನ ಸೆಳೆಯಬಹುದಾಗಿತ್ತು ಅವರವರ ವಿಷಯ ಎತ್ತಬಹುದಾಗಿತ್ತು ಈ ರೀತಿ ಗಲಾಟೆ ಮಾಡಿದರೆ ಹೇಗೆ? ನೀವು ಶಾಸಕರು, ಶಾಸನ ಮಾಡತಕ್ಕಂಥವರು ಜವಾಬ್ದಾರಿವುಳ್ಳವರು ಈ ಐದೂವರೆ ಕೋಟಿ ಜನರ ರಕ್ಷಣೆ ಮಾಡುವುದಕ್ಕೆ ಜನ ಪ್ರತಿನಿಧಿಗಳಾಗಿ ಬಂದಿರುವವರು ನೀವೇ ಈ ರೀತಿ ವರ್ತನೆ ಮಾಡಿದರೆ ಜನ ಹೇಗೆ ವರ್ತನೆ ಮಾಡಬಹುದು? ನಿಮ್ಮ ಅಧಿಕಾರಿಗಳು ಹೇಗೆ ವರ್ತನೆ ಮಾಡಬಹುದು, ಇನ್ನೊಬ್ಬರು ಹೇಗೆ ವರ್ತನೆ ಮಾಡಬಹುದು? No, No, ಈಗ ನಾನು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರನ್ನು ಕರೆದಿದ್ದೇನೆ. ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಬೇಕು ವಾಟಾಳ್ ನಾಗರಾಜ್‌ರವರೇ, ತಾವು ದಯಮಾಡಿ ಮಾತನಾಡಿ

6 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು (ಮುಂದು)

9 ರಾಜ್ಯ ಸರ್ಕಾರ ಆಯವ್ಯಯವನ್ನು ಮಂಡಿಸಿದ ಮೇಲೆ ಆರ್ಥಿಕ ನೀತಿಯಿಂದ ಪರಭಾಷಾ ಚಿತ್ರಗಳಿಗೆ ಅಪಾರವಾದ ಬೆಂಬಲವನ್ನು ನೀಡಿದಂತಾಗಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಆಯವ್ಯಯವನ್ನು ಮಂಡಿಸಿದ ಮೇಲೆ ಆರ್ಥಿಕ ನೀತಿಯಿಂದ ಪರಭಾಷಾ